**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 42/2022**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 23.01.2025**

**ಪಾಟೀ ಸವಾಲುಃ ಶ್ರೀ ಎನ್ ಬಿ ಎಚ್ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರುಃ**

1. ದಾವಾ ಆಸ್ತಿ ಮೂಲತಃ ಗ್ರಾಮ ಪಂಚಾಯತ ನಂಃ724 ಎಂದರೆ ಸರಿ. ನನ್ನ ತಂದೆ ನಿಂಗನಗೌಡ ತೀರಿಕೊಂಡ ನಂತರ ಪ್ರತಿವಾದಿ 1 ರಿಂದ 3 ರವರ ಹೆಸರು ದಾಖಲು ಆಗಿತ್ತು ಎಂದರೆ ಸಾಕ್ಷಿ ಮೊದಲನೆಯದಾಗಿ ಸುಳ್ಳು ಎಂದು ನುಡಿದು, ನಂತರದಲ್ಲಿ ಮೊದಲು ದಾಖಲು ಇತ್ತು ಎಂದು ನುಡಿಯುತ್ತಾರೆ. ನಾವು ವಾದಿಯರ ಮತ್ತು 3 ನೇ ಪ್ರತಿವಾದಿ ಇವರ ಮದುವೆಯನ್ನು ನಮಗೆ ತಲಾ 5 ತೋಲೆ ಬಂಗಾರದ ಆಭರಣಗಳನ್ನು ನೀಡಿ ಉತ್ತಮ ಮನೆತನದ ವ್ಯಕ್ತಿಗಳಿಗೆ ನೀಡಿ ಮದುವೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಗಳ ಕಬ್ಜಾವಹಿವಾಟವನ್ನು ಸಂಪೂರ್ಣವಾಗಿ 1, 2 ನೇ ಪ್ರತಿವಾದಿ ಹಾಗೂ 4 ರಿಂದ 6 ನೇ ಪ್ರತಿವಾದಿ ಮೃತ ರಾಮನಗೌಡ ಇವರ ಹೆಂಡತಿ ಮಕ್ಕಳೇ ಮಾಡಿಕೊಂಡು ಬರುತಿದ್ದಾರೆ ಎಂದರೆ ಸಾಕ್ಷಿ ನಾವು ಸಹ ಇದ್ದೇವೆ ಎಂದು ನುಡಿಯುತ್ತಾರೆ. ನಾವು ನಮ್ಮ ಹಿಸ್ಸೆಗೆ ಸಲ್ಲುವ ತಲಾ 5 ತೋಲೆ ಬಂಗಾರ ಪಡೆದಿದ್ದರು ಸಹ ಇಲ್ಲ ಅಂತ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ ಹಾಗೂ 3, 7 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**